**<u>ದಿನಾಂಕಃ 04.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ- 2 ಮತ್ತು 3ನೇ ಪ್ರತಿವಾದಿಗಳ ಪರ ಶ್ರೀ ಕೆ.ಟಿ.ಟಿ. ವಕೀಲರಿಂದ</u>**

1) ಖಾತೆ ಬದಲಾವಣೆ ಮಾಡಿಸಿಕೊಳ್ಳಲು ನಾನು ಕ್ರಯ ಪತ್ರದ ಪ್ರತಿಯನ್ನು ಪಂಚಾಯಿತಿಗೆ ಹಾಜರುಪಡಿಸಿದ್ದೆ. ಖಾತೆ ಬದಲಾವಣೆಗಾಗಿ ಅರ್ಜಿ ಸಲ್ಲಿಸಿದ ನಂತರ ಪಂಚಾಯಿತಿಯವರು ಸ್ಥಳಕ್ಕೆ ಬಂದು ಅಳತೆ ಕಾರ್ಯ ಮಾಡಿರುತ್ತಾರೆ. ಸ್ಥಳಕ್ಕೆ ಪಂಚಾಯಿತಿಯವರು ಭೇಟಿ ಕೊಟ್ಟ ಕಾಲಕ್ಕೆ ಯಾವುದೇ ಮಹಜರ್ ಮಾಡಿರುವುದಿಲ್ಲ. ಅಳತೆ ಪೂರ್ವದಲ್ಲಿ ಪಂಚಾಯಿತಿಯವರು ಅಕ್ಕಪಕ್ಕದ ಜಾಗದ ಮಾಲೀಕರಿಗೆ ನೋಟೀಸನ್ನು ನೀಡಿರುವುದಿಲ್ಲ. ದಾವಾ ಪತ್ರದಲ್ಲಿ ಇರುವ ಚಕ್ಕುಬಂದಿಯಲ್ಲಿ 2 ಮತ್ತು 3ನೇ ಪ್ರತಿವಾದಿಗಳ ಹೆಸರು ನಮೂದು ಮಾಡಿರಬಹುದು. 3ನೇ ಪ್ರತಿವಾದಿಯ ಹೆಸರಿಗೆ ಯಾವಾಗ ಖಾತೆ ಬದಲಾವಣೆ ಆಗಿದೆ ಎಂದು ನನಗೆ ಗೊತ್ತಿಲ್ಲ. 2ನೇ ಪ್ರತಿವಾದಿಗೆ ಪಂಚಾಯಿತಿಯವರು ನೋಟೀಸನ್ನು ನೀಡಿದ್ದರೇ ಎಂದು ನನಗೆ ಗೊತ್ತಿಲ್ಲ. ಯಾವ ವರ್ಷದಲ್ಲಿ ಮೃತ 2ನೇ ಪ್ರತಿವಾದಿ ಸ್ವತ್ತನ್ನು ಖರೀದಿ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಮೃತ 2ನೇ ಪ್ರತಿವಾದಿಗೆ ಎಷ್ಟು ಆಸ್ತಿ ಇದೆ ಎಂದು ನನಗೆ ಗೊತ್ತಿಲ್ಲ. ಚಿಕ್ಕ ಮಾದೇಗೌಡರಿಗೂ ಮತ್ತು ಮೃತ 2ನೇ ಪ್ರತಿವಾದಿಗೆ ಏನು ಸಂಬಂಧ ಎಂದು ನನಗೆ ಗೊತ್ತಿಲ್ಲ.

2) ನನ್ನ ತಾತನ ಹೆಸರು ಕಾಳಈರೇಗೌಡ. ಬೋರಮ್ಮನ ದತ್ತು ಮಗ ಕೆಂಪೇಗೌಡರಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲ. ಮಲ್ಲೇಗೌಡರ ಮಗ ಮಲ್ಲೂಗೌಡನಿಗೆ ಈ ಹಿಂದೆ ದಾವಾ ಸ್ವತ್ತು ಗೌರಮ್ಮನಿಂದ ಬಂದಿತ್ತು. ನನ್ನ ಕ್ರಯ ಪತ್ರದಲ್ಲಿ ಮಲ್ಲೂಗೌಡರಿಗೆ ಆಸ್ತಿ ಹೇಗೆ ಬಂದಿತ್ತು ಎಂದು ಉಲ್ಲೇಖಿಸಲಾಗಿದೆ. ಆ ದಾಖಲೆಯಲ್ಲಿ ಮಲ್ಲೂಗೌಡರು ದಾವಾ ಆಸ್ತಿ ತನಗೆ ಪಿತ್ರಾರ್ಜಿತವಾಗಿ ಬಂದಿತ್ತು

ಎಂದು ತಿಳಿಸಿದ್ದಾರೆ ಎಂದರೆ ಸರಿಯಲ್ಲ. ಮಲ್ಲೂಗೌಡರಿಗೆ ಗೌರಮ್ಮ ಬರೆದುಕೊಟ್ಟ ಕ್ರಯಪತ್ರದ ಚಕ್ಕುಬಂದಿಯಲ್ಲಿ ಪೂರ್ವ ದಿಕ್ಕಿಗೆ ಬೋಳೇಗೌಡನ ಜಾಗ ಎಂದು ತೋರಿಸಲಾಗಿದೆ. ನಿಪಿ.3 ರಲ್ಲಿ ನಮೂದು ಮಾಡಿರುವ ಚಕ್ಕುಬಂದಿ ಸರಿ ಇದೆಯೇ ಅಥವಾ ಇಲ್ಲವೇ ಎಂದು ನನಗೆ ಗೊತ್ತಿಲ್ಲ. ಪುಟ್ಟಮ್ಮ ಮತ್ತು ಬೋಳೇಗೌಡರಿಗೆ ಏನು ಸಂಬಂಧ ಎಂದು ನನಗೆ ಗೊತ್ತಿಲ್ಲ.

3) ನನ್ನ ಆಸ್ತಿಯ ಉತ್ತರಕ್ಕೆ ರಸ್ತೆ ಇದ್ದು ನನ್ನ ಸ್ವತ್ತನ್ನು ನಾನು ಅನುಭವಿಸಲು ಯಾವುದೇ ತೊಂದರೆ ಇಲ್ಲ ಎಂದರೆ ಸರಿ. ನಿಪಿ.4 ಅನ್ನು ಯಾವ ವರ್ಷದಲ್ಲಿ ಪಡೆದಿರುತ್ತೀರಾ ಎಂದರೆ ಸಾಕ್ಷಿಯು ಕಳೆದ 24 ವರ್ಷಗಳ ಹಿಂದೆ ಪಡೆದಿದ್ದಾಗಿ ನುಡಿದಿರುತ್ತಾರೆ. ನಾನು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದ ಸಮಯದಲ್ಲಿ ಅದು ಪಂಚಾಯಿತಿಗೆ ಸೇರಿರಲಿಲ್ಲ ಎಂದರೆ ಸರಿ. ನಾನು ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದ ನಂತರ ಕಂದಾಯ ದಾಖಲೆಗಳ ಮೇರೆಗೆ ಅದರ ಖಾತೆಯನ್ನು ಮಾಡಿಸಿಕೊಂಡಿರುತ್ತೇನೆ ಎಂದರೆ ಸರಿ. ನಿಪಿ.4 ರ ದಾಖಲೆಯನ್ನು ನನ್ನ ಕ್ರಯ ಪತ್ರದ ಆಧಾರದ ಮೇಲೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1998-99 ರ ಸಾಲಿನಲ್ಲಿ ಪಂಚಾಯಿತಿಯಲ್ಲಿ ಯಾವುದೇ ಸ್ವತ್ತುಗಳಿಗೆ ಚಕ್ಕುಬಂದಿಯನ್ನು ನಮೂದು ಮಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ನಿಪಿ.4 ರಲ್ಲಿ ತಿಳಿಸಿರುವ ಆಸ್ತಿಯ ನಂ.240 ಕ್ಕೆ ಖಾನೇಷುಮಾರಿ ನಂಬರ್ ಅನ್ನು ಪಂಚಾಯಿತಿಯವರು ಸೇರಿಸುತ್ತಿದ್ದರು ಎಂದರೆ ಸರಿಯಲ್ಲ.

4) ನಿಪಿ.4 ಮತ್ತು 5 ರ ದಾಖಲೆಯನ್ನು ದಾವೆ ಹಾಕುವ ಸಲುವಾಗಿ ಸೃಷ್ಟಿ ಮಾಡಿರುತ್ತೇವೆ ಎಂದರೆ ಸರಿಯಲ್ಲ. ನಿಪಿ.5 ರಲ್ಲಿ ಬರೆದಿರುವ ಅಳತೆಯನ್ನು ಖರೀದಿ ಪತ್ರದ ಆಧಾರದ ಮೇಲೆ ನಮೂದು ಮಾಡಿರುತ್ತಾರೆ. 2005 ರಿಂದ ಈಚೆಗೆ ಮಾತ್ರ ಪಂಚಾಯಿತಿ ದಾಖಲೆಗಳಲ್ಲಿ ಅಳತೆಯನ್ನು ನಮೂದು ಮಾಡುವ ಪ್ರಕ್ರಿಯೆ ಜಾರಿಯಲ್ಲಿ ಇತ್ತು ಎಂದರೆ ಸಾಕ್ಷಿಯು ಆ ಬಗ್ಗೆ ತನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಿಪಿ.5 ರಲ್ಲಿ ಸ್ವತ್ತಿನ ಅಳತೆಯನ್ನು ನಮೂದು ಮಾಡುವ ಪೂರ್ವದಲ್ಲಿ ಆ ಸ್ವತ್ತಿನ

ಬಾಜುದಾರರಿಗೆ ನೋಟೀಸನ್ನು ನೀಡಿದ್ದರೇ ಎಂಬ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ಸ್ವತ್ತನ್ನು ನಾನು ಅಳತೆ ಮಾಡಿಸಿಲ್ಲ ಎಂದರೆ ಸರಿಯಲ್ಲ. ನಿಪಿ.8 ರ ಅನುಮತಿ ಪತ್ರದಲ್ಲಿ ಸ್ವತ್ತಿನ ಅಳತೆಯನ್ನು ನಮೂದು ಮಾಡಿಲ್ಲ ಎಂದರೆ ಸರಿ. ನಿಪಿ.9 ರ ಅನುಮತಿ ಪತ್ರದಲ್ಲಿ 25*45 ಅಡಿ ಜಾಗದಲ್ಲಿ ಮನೆ ಕಟ್ಟಲು ಪರವಾನಗಿ ನೀಡಿದ್ದರು. ನಾನು ಹೇಳಿದಂತೆ ಯಾವುದೇ ವಿಸ್ತೀರ್ಣ ಅದರಲ್ಲಿ ನಮೂದು ಆಗಿಲ್ಲ ಎಂದರೆ ಸರಿಯಲ್ಲ.

5) ನಿಪಿ.10 ರ ದಾಖಲೆಯಲ್ಲಿ ತಿಳಿಸಿದಂತೆ 6*6 ಅಡಿ ಜಾಗವನ್ನು 10 ವರ್ಷಗಳ ಹಿಂದೆ ಪಂಚಾಯಿತಿಗೆ ಬಿಟ್ಟುಕೊಟ್ಟಿರುತ್ತೇನೆ. ಸದರಿ ಸ್ವತ್ತನ್ನು ನಾನು ಪಂಚಾಯಿತಿಗೆ ಬಿಟ್ಟುಕೊಟ್ಟಿರುತ್ತೇನೆ. ಸದರಿ 6*6 ಅಡಿ ಜಾಗದ ಅಳತೆಯನ್ನು ನನ್ನ ಒಟ್ಟು ವಿಸ್ತೀರ್ಣದ ಆಸ್ತಿಯಲ್ಲಿ ಕಡಿತಗೊಳಿಸಿರುವುದಿಲ್ಲ. ದಾವಾ ಸ್ವತ್ತಿನಲ್ಲಿ ತಿಳಿಸಿದ ಒಟ್ಟು ವಿಸ್ತೀರ್ಣದ ಒಳಗೆ ನಿಪಿ.10 ರಲ್ಲಿ ತಿಳಿಸಿದ 6*6 ಅಡಿ ಜಾಗವೂ ಸಹ ಸೇರಿದೆ ಎಂದರೆ ಸರಿ. ನನ್ನ ಸ್ವತ್ತನ್ನು ಅಳತೆ ಮಾಡಿಸಿರುವ ಬಗ್ಗೆ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಅಳತೆಯನ್ನು ನಾನು ಮಾಡಿಸಿರುವುದು ಸರಿ ಇಲ್ಲ ಆದ ಕಾರಣ ಪುನಃ ಅಳತೆ ಮಾಡಿ ಎಂದು ಪ್ರತಿವಾದಿಗಳು ತಕರಾರು ಮಾಡಿರುತ್ತಾರೆ. ನಾನು ನನ್ನ ಕ್ರಯ ಪತ್ರದಲ್ಲಿ ಒಟ್ಟು ವಿಸ್ತೀರ್ಣ ನಮೂದು ಆಗಿರದ ಕಾರಣ ನಾನು ನನ್ನ ಅನುಕೂಲಕ್ಕೆ ತಕ್ಕಂತೆ ದಾವೆಯಲ್ಲಿ ಅಳತೆಯನ್ನು ಸೇರಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನಾನು ನಮೂದಿಸಿರುವ ವಿಸ್ತೀರ್ಣದಿಂದ ಪ್ರತಿವಾದಿಗಳಿಗೆ ಮತ್ತು ಅವರ ಸ್ವತ್ತಿಗೆ ತೊಂದರೆ ಉಂಟಾಗುತ್ತಿದೆ ಎಂದರೆ ಸರಿಯಲ್ಲ.

6) ನನ್ನ ಕ್ರಯಪತ್ರದಲ್ಲಿ ಇರುವ ಚಕ್ಕುಬಂದಿಗಳು ಅದರ ಹಿಂದೆ ಇರುವ ಇತರೆ ಕ್ರಯ ಪತ್ರಗಳು ಅಂದರೆ ನಿಪಿ.2 ಮತ್ತು 3 ರ ದಾಖಲೆಯಲ್ಲಿನ ಚಕ್ಕುಬಂದಿಗಳಿಗೆ ತಾಳೆ ಆಗುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವೆಯಲ್ಲಿ ತಿಳಿಸಿದಂತೆ ಅಳತೆಯ ಸ್ವತ್ತಿನಲ್ಲಿ ಯಾವತ್ತೂ ಸ್ವಾಧೀನದಲ್ಲಿ ಇಲ್ಲ ಮತ್ತು ಆ ಅಳತೆಯ ಜಾಗವನ್ನು ನಾನು ಖರೀದಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾವಾ ಸ್ವತ್ತಿನ ಮಾಲೀಕ ಆಗಿರುವುದಿಲ್ಲ

ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸೇರಿದ ಸ್ವತ್ತನ್ನು ಲಪಟಾಯಿಸಲು ಸುಳ್ಳು ಅಳತೆ ಮತ್ತು ಚಕ್ಕುಬಂದಿಯನ್ನು ನನ್ನ ವಾದ ಪತ್ರದಲ್ಲಿ ಸೇರಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕರಣ ಮಾಡಲಾಯಿತು).

ಓ. ಹೆ. ಕೇ. ಸರಿ ಇದೆ.

**ಪ್ರಧಾನ ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ**
**ನ್ಯಾಯಾಲಯ, ಚನ್ನಪಟ್ಟಣ.**